**ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕು, ಬಿಸಿಲುನಾಡಿನಲ್ಲಿದ್ದೂ ಕಣ್ಣು ತಂಪಾಗಿಸುವ ತಾಣ. ಮೃದು ಮನದ ಜನರ ಜವಾರಿ ನುಡಿಗಳು ಮನಸ್ಸನ್ನು ತಣ್ಣಗಿಡುತ್ತವೆ. ಬರಗಾಲ ಬವಣೆಯ ಹಣೆಪಟ್ಟಿ ಹೋಗಿ ಸಮೃದ್ಧ ಸಂಪನ್ನವಾಗತೊಡಗಿದೆ.**

■ ಸಿ.ಕೆ. ಗಣಪ್ಪನವರ ಮುಂಡರಗಿ

# ಬಿಸಿಲ್ನಾಡಿನಾಗ, ಸಮೃದ್ಧಿ ಪೈರಿನ ಮುಂಡರಗಿ

ಗದಗ ಜಿಲ್ಲೆ ಮುಂಡರಗಿ ತಾಲೂಕು ಬಿಸಿಲು ನಾಡಲ್ಲಿ ತುಂಗೆಯ ನೀರಿದೆ. ನೀರಿಗೆ ನಿಧಾನ, ಅನ್ನಕ್ಕೆ ಅಭಾವ, ಕಲ್ಲಿಗೆ ಕಾಮಧೇನು ಎನಿಸಿಕೊಳ್ಳುವ, ಆಯುರ್ವೇದ ಔಷಧಿಗಳ ಸಸ್ಯಸಂಪತ್ತು ಹೊಂದಿದ ಕಪ್ಪತಗುಡ್ಡ, ಕಲ್ಲುಗುಡ್ಡದ ನಡುವೆ ನಿಂತಿರುವ ಲಕ್ಷ್ಮಿಕನಕ ನರಸಿಂಹ, ಧಾರ್ಮಿಕ ಸ್ಥಳ ಅನ್ನದಾನೀಶ್ವರ, ಡಂಬಳ ತೋಂಟದಾರ್ಯ ಮಠ, ರೊಟ್ಟಿ ಜಾತ್ರೆ, ದರ್ಗಾಗಳು ಭಾವೈಕ್ಯದ ಭಾವ ಸ್ಫುರಿಸುತ್ತವೆ. ಐತಿಹಾಸಿಕ ದೊಡ್ಡಬಸವೇಶ್ವರ, ಸೋಮೇಶ್ವರ ದೇವಸ್ಥಾನ, ಕೆರೆಕಟ್ಟೆಗಳು ಮೇಳೈಸಿವೆ. ಹಾಗೆ ಬಿರುಸಿನಿಂದ ಕೂಡಿದ್ದರೂ ಮೃದು ಮನದ ಜನರ ಜವಾರಿ ನುಡಿಗಳು ಮನಸ್ಸನ್ನು ತಣ್ಣಗಿಡುತ್ತವೆ. ಬರಗಾಲ ಬವಣೆಯ ಹಣೆಪಟ್ಟಿ ಹೋಗಿ ಸಮೃದ್ಧ ಸಂಪನ್ನವಾಗತೊಡಗಿದೆ.

ರಿಟೈರ್ಡ್ ಮಾಸ್ತರ್ ಬೆಂಗ್ಳೂರ್ ಸೇರಿ 40 ವರ್ಷಾದ್ರೂ ತನ್ನ ಮೂಲ ಮುಂಡರಗಿ ಜವಾರಿ ಭಾಷೆ ಬಿಡದ ಇರಾದ್ ನನಗೆ ಆಶ್ಚರ್ಯ ತಂದಿತ್ತು. ‘ಏ ಮಾರಾಯ, ಈ ಸರ್ಕಾರಿ ನೌಕರಿ ಸೇರಿ ಊರಾ ಮರ್ತು ಮತ್ತ ಹೊಳ್ಳಿ ಬರದ್ಹಾಂಗ ಆಗಿತ್ತು ನೋಡು, ಖಾಲಿ ಮನಿ ಬರಿ ಮನ್ಯಾಗ ಏನೈತಿ ಅಂತಾ ಕಷ್ಟಪಟ್ಟ ಪಟ್ಟಣ ಸೇರಿದೆಪಾ, ಹ್ಯಾಂಗೊ ಜೀವ್ನ ನಡೀತು. ಈ ಮುಂಡರಗಿ ಬದ್ಲಾಗಂಗಿಲ್ಲ ಅಂತಾ ಮಾಡಿದ್ದೆ, ಅಬ್ಬಬ್ಬಾ ಏನ್ ಬೆಳೆದೈತೋ ತಮ್ಮ ಇದು, ನಾಲ್ವತ್ ವರ್ಷದಾಗ ಹೊಳಿ ನೀರ್ ಬಂದೈತಿ, ಸುಗರ್ ಫ್ಯಾಕ್ಟರಿ, ಬೆಂಗ್ಳೂರ ಸಮೀಪ ಮಾಡಾಕ ತುಂಗಭದ್ರ ನದಿಗೆ ಅಡ್ಡಸೇತುವೆ ಕಟ್ಟಿದರೂ ನೋಡು ಇದರ ನಸೀಬ ತೆರಿತು’...

ವಡಾ ವಡಾ ಮಾತಾಡ್ತಿದ್ದವಂಗ್ ಬ್ರೇಕ್ ಹಾಕಿದ ನಾನು, ಒಂದಿಷ್ಟು ಮಾತು ಸೇರಿಸಿದೆ... ರೀ ಸರ್ರ ಇಲ್ಲಿಗೆ ನೌಕರಿ ಮಾಡಾಕ್ ಬಂದಾರಂದ್ರ ಪನಿಶ್ಮೆಂಟ್ ಇದ್ದಾಂಗ್. ಅಂಥಾವರ ಇಲ್ಲಿಗೆ ಬರ್ತಿದ್ರು. ಕುಡಿಯಾಕ ಒಂದು ಚೊಲೊ ನೀರ್ ಇರ್ರಲಿಲ್ಲ, ಸವುಳು ನೀರು, ಫ್ಲೋರೈಡ್ ನೀರು ಕುಡುದು ಹಲ್ ಹಳದಿ ಮಾಡಿಕೊಂಡು, ನಡಾಬಾಗಿ, ಕುಂತರ ಏಳಾಕ ಬರ್ತಿದ್ದಿಲ್ಲ ಎದ್ರ ಕುಂದ್ರಾಕ ಬರ್ತಿದ್ದಿಲ್ಲ, 20 ವರ್ಷದವರು 70 ವರ್ಷದವರಂತೆ ಕಂಡವರಿಗೆ ಈ ತಾಲೂಕಿನ ಮದುವೆಯಾಗೊ ವಯಸ್ಸಿನ ಹುಡುಗ್ರಿಗೆ ಕನ್ಯಾ ಹುಟ್ಟಲಿಲ್ಲರೀ ಏನ್ ಕೇಳ್ತೀರಿ, ಉರಿ ಉರಿ ಬಿಸಿಲು, ಅದಾ ಕೊಪ್ಪ ರೋಡಿನಾಗ ಬೆಲ್ಲದ ದಣ್ಯಾರ ಬಾವ್ಯಾನ ಸಿಹಿ ನೀರು ಬಿಟ್ಟರೆ ಜಂಗು ಹತ್ತಿದ ಬೋರವೆಲ್ ನೀರು ಕುಡುದು ಹೊಟ್ಟಿ ಜಳ ಜಳ



## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.